ತಿಳಿಸಿ ದಿನಾಂಕ: 19.10.2002 ರಂದು ಹಿಂಬರಹ ನೀಡಲಾಗಿದೆ. ಮತ್ತು ಸಂಸ್ಥೆಯವರ ಪುನರ್ ಪರಿಶೀಲನೆ ಕೋರಿರುವ ಮನವಿಯನ್ನೂ ಸಹ ಪರಿಶೀಲಿಸಿ, ದಿನಾಂಕ: 7.2.03 ರಂದು ಹಿಂಬರಹ ನೀಡಲಾಗಿದೆ.

ಬೆಳ್ತಂಗಡಿ ತಾಲ್ಲೂಕಿನ "ಮಾಲಾಡಿ" ಐಟಿಐ ಶಿಕ್ಷಣಾಲಯ ಕಟ್ಟಡ

4347(5024) ಶ್ರೀ ಪ್ರಭಾಕರ ಬಂಗೇರ ಕೆ. (ಬೆಳ್ತಂಗಡಿ) : ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಬೆಳ್ತಂಗಡಿ ತಾಲ್ಲೂಕಿನ ಮಾಲಾಡಿಯಲ್ಲಿರುವ ಐಟಿಐ ಶಿಕ್ಷಣಾಲಯ ಪ್ರಾರಂಭಗೊಂಡು 6–7 ವರ್ಷಗಳಾಗಿದ್ದರೂ ಸ್ವಂತ ಕಟ್ಟಡ ಇಲ್ಲದಿರುವುದನ್ನು ಸರ್ಕಾರ ಗಮನಿಸಿದೆಯೆ :

ಆ) ಹಾಗಿದ್ದಲ್ಲಿ, ಈ ಬಗ್ಗೆ ಸರಕಾರದ ಕ್ರಮಗಳೇನು ; ಜಮೀನು ಮತ್ತಿತರ ಅನುಕೂಲತೆಗಳಿದ್ದರೂ ಕಟ್ಟಡ ಕಾಮಗಾರಿಯನ್ನು ಪ್ರಾರಂಭಿಸಲು ಇರುವ ತೊಂದರೆಗಳೇನು :

ಇ) ಯಾವಾಗ ಕಟ್ಟಡ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು ?

ಶ್ರೀ ಖಮರುಲ್ ಇಸ್ಲಾಂ (ಕಾರ್ಮಿಕ ಸಚಿವರು) :

ಅ) ಹೌದು.

ಆ) ಮುಖ್ಯ ವಾಸ್ತುಶಿಲ್ಪಿಯವರಿಂದ ನೀಲಿನಕ್ಷೆ ಮತ್ತು ಅಂದಾಜು ತಯಾರಿಸಲಾಗುತ್ತಿದೆ.

ಇ) ಆಯವ್ಯಯ ಲಭ್ಯತೆ ಅನುಸರಿಸಿ ಕ್ರಮ ಕೈಗೊಳ್ಳಲಾಗುವುದು.

ಬರಗಾಲ ಪರಿಹಾರದ ಕಾರ್ಯಗಳು

4348(4992) ಶ್ರೀ ಪೂಜಾರ್ ಪಿ.ಹೆಚ್. (ಬಾಗಲಕೋಟೆ) : ಮಾನ್ಯ ಕಂದಾಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಕಳೆದ ಮೂರು ವರ್ಷಗಳಿಂದ ಇಂದಿನವರೆಗೆ ಬರಗಾಲ ಪರಿಹಾರ ಕಾರ್ಯಕ್ರಮ ದಡಿಯಲ್ಲಿ ರಾಜ್ಯದ ವಿವಿಧ ಕಾರ್ಯಕ್ರಮಗಳಿಗೆ ಕೇಂದ್ರ ಸರ್ಕಾರ ನೀಡಿದ ಅನುದಾನವೆಷ್ಟು ; ರಾಜ್ಯದ ಪಾಲುದಾರಿಕೆ ಎಷ್ಟು ; ನಗದು ಎಷ್ಟು ; ಆಹಾರಧಾನ್ಯದ ಪ್ರಮಾಣವೆಷ್ಟು ; (ವರ್ಷವಾರು ವಿವರ ನೀಡುವುದು) ;

ಆ) ಮೇಲ್ಕಂಡಂತೆ ನೀಡಲಾದ ಸಹಾಯವನ್ನು ಪ್ರತಿ ಜಿಲ್ಲಾವಾರು ತಾಲ್ಲೂಕುವಾರು ವಿಂಗಡಿಸಿ ನೀಡಲಾದ ವಿವರ, ಖರ್ಚು ಮಾಡಿದ ವಿವರಗಳನ್ನು ನೀಡುವುದು ?

ಶ್ರೀ ಮಲ್ಲಿಕಾರ್ಜುನ ನಾಗಪ್ಪ ಎಂ. (ಕಂದಾಯ ರಾಜ್ಯ ಸಚಿವರು) :

ಅ) ಕೇಂದ್ರ ಸರ್ಕಾರವು ಪ್ರಕೃತಿ ವಿಕೋಪ ಪರಿಹಾರ ನಿಧಿ / ಎನ್‌ಸಿಸಿಎಫ್ ನಿಂದ ಅನುದಾನ ಮತ್ತು ಬರಪೀಡಿತ ಪ್ರದೇಶಗಳಲ್ಲಿ ಉದ್ಯೋಗಸೃಜನೆಗಾಗಿ ಆಹಾರಧಾನ್ಯವನ್ನು ಈ ಕೆಳಕಂಡಂತೆ ಬಿಡುಗಡೆ ಮಾಡಿದೆ.

ವರ್ಷ	ಕೇಂದ್ರ ಸರ್ಕಾರದಿಂದ ಬಿಡುಗಡೆಯಾದ		ರಾಜ್ಯ ಸರಕಾರದಿಂದ
	ಅನುದಾನ (ರೂ.ಕೋಟಿಗಳಲ್ಲಿ)	ಆಹಾರಧನ್ಯ (ಮೆ.ಟನ್‌ಗಳಲ್ಲಿ)	ಬಿಡುಗಡೆಯಾದ ಅನುದಾನ (ರೂ. ಕೋಟಿಗಳಲ್ಲಿ)
1. 2000–01	55.93	--	78.06
2. 2001–02	58.72	1,00,000	115.50

3. 2002–03	258.54	5,30,000	192.31
4. 2003–04	43.14	1,90,000	106.40

ಕೇಂದ್ರ ಸರ್ಕಾರವು ಬಿಡುಗಡೆ ಮಾಡಿದ ಎಲ್ಲಾ ಆಹಾರಧಾನ್ಯಗಳನ್ನು ಜಿಲ್ಲೆಗಳಿಗೆ ಹಂಚಿಕೆ ಮಾಡಲಾಗಿದೆ.

ಆ) ಜಿಲ್ಲಾವಾರು ಅನುದಾನ ಬಿಡುಗಡೆ ಮಾಲಾಗುತ್ತಿದೆ. ತಾಲ್ಲೂಕುವಾರು ಅನುದಾನ ನೀಡುತ್ತಿಲ್ಲ.

ಜಿಲ್ಲಾವಾರು ಬಿಡುಗಡೆ ಮಾಡಿದ ಅನುದಾನ ಹಾಗೂ ಖರ್ಚು ಮಾಡಿದ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಕಮಲಾಪುರ ಕ್ಷೇತ್ರದ ಲೋಕೋಪಯೋಗಿ ರಸ್ತೆಗಳ ದುರಸ್ತಿ

4349(3906) ಶ್ರೀ ರೇವುನಾಯಕ್ ಬೆಳಮಗಿ (ಕಮಲಪೂರ್) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಗುಲ್ಬರ್ಗಾ ಜಿಲ್ಲೆಯ ಕಮಲಾಪುರ ಮತಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ಲೋಕೋಪಯೋಗಿ ರಸ್ತೆಗಳ ವಿವರ ಒದಗಿಸುವುದು ;

ಆ) ಈ ರಸ್ತೆಗಳ ಪೈಕಿ ಎಷ್ಟು ರಸ್ತೆಗಳು ಹಾಳಾಗಿವೆ ; ವಿವರ ನೀಡುವುದು ; ಎಷ್ಟು ಕಿ.ಮೀ. ದೂರದವರೆಗೆ ದುರಸ್ಥಿಗೆ ಬಂದಿವೆ ;

ಇ) ಬಂದಿದ್ದಲ್ಲಿ ಅವುಗಳನ್ನು ದುರಸ್ಥಿ ಮಾಡಿಸಲು ಯಾವ ಕ್ರಮವನ್ನು ಕೈಗೊಳ್ಳದೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ಹಾಗೂ ಕ್ರಮ ಕೈಗೊಳ್ಳಲಾಗುವುದೆ ?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು) :

ಅ) ಲೋಕೋಪಯೋಗಿ ಇಲಾಖೆ ಗುಲ್ಬರ್ಗಾ ವಿಭಾಗದ ವ್ಯಾಪ್ತಿಯಲ್ಲಿ ಕಮಲಾಪುರ ಮತಕ್ಷೇತ್ರದಲ್ಲಿ ಬರುವ ರಸ್ತೆಗಳು ಈ ಕೆಳಗಿನಂತಿವೆ.

ಕ್ರ. ಸಂ.	ರಸ್ತೆಯ ಹೆಸರು	ಉದ್ದ ಕಿಮೀ.ಗಳಲ್ಲಿ	ರಾಜ್ಯ ಹೆದ್ದಾರಿ ಜಿಲ್ಲಾ ಮುಖ್ಯ ರಸ್ತೆ
1	ಶ್ರೀರಂಗಪಟ್ಟಣ ಬೀದರ್ ರಸ್ತೆ ಕಿ.ಮೀ. 614.00 ರಿಂದ 650.80	36.80	ರಾಜ್ಯ ಹೆದ್ದಾರಿ
2	ಖಜೂರಿ ಪಡಸಾವಳಗಿ ರಸ್ತೆ ಕಿ.ಮೀ. 0.00 ರಿಂದ 9.60	9.60	ಜಿಲ್ಲಾ ಮುಖ್ಯ ರಸ್ತೆ
3	ತೇಲಿಕುಣಿ ಕೋಕನ ಹಿಪ್ಪರಗಾ ರಸ್ತೆ ಕಿ.ಮೀ. 0.00 ದಿಂದ 19.90	19.90	ಜಿಲ್ಲಾ ಮುಖ್ಯ ರಸ್ತೆ
4	ನರೋಣ ಚುಂಚನಸೂರ ರಸ್ತೆ ಕಿ.ಮೀ. 0.00 ದಿಂದ 6.40	6.40	ಜಿಲ್ಲಾ ಮುಖ್ಯ ರಸ್ತೆ
5	ಗುಲ್ಬರ್ಗಾ ಬೋಧನ್ ರಸ್ತೆ ಕಿ.ಮೀ. 10.00 ದಿಂದ 27.00	17.00	ಜಿಲ್ಲಾ ಮುಖ್ಯ ರಸ್ತೆ
6	ಕಮಲಾಪೂರ ಸಸ್ತಾಪೂರ ರಸ್ತೆ ಕಿ.ಮೀ. 0.00 ದಿಂದ 7.40	7.40	ಜಿಲ್ಲಾ ಮುಖ್ಯ ರಸ್ತೆ